ಹೇಳಿದ್ದಾರೆ. ಮತ್ತೆ ಕಂದಾಯ ಮಂತ್ರಿಗಳು ಒಂದುಸಾರಿ ಉತ್ತರ ಕೊಡುವಂಥ ಸಂದರ್ಭದಲ್ಲಿ ಸುಮಾರು ಮೂರು ಸಾವಿರ ಚಿಲ್ಲರೆ ಎಕರೆ ಒತ್ತುವರಿಯಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆ ಸ್ಪಷ್ಟವಾದ ದಾಖಲೆಗಳು ನಿಮ್ಮ ಹತ್ತಿರ ಇದ್ದಲ್ಲಿ ಚರ್ಚೆಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಹಾಗೆಯೇ, ಇದನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದೇನೆ. ಆನಂತರ, ಇದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಈಗಲೇ ಪ್ರಸ್ತಾಪ ಮಾಡಲೇ ಅಥವಾ ಆನಂತರ ಪ್ರಸ್ತಾಪ ಮಾಡಲೆ?

ಅಧ್ಯಕ್ಷರು : ತಾವು ಆನಂತರ ಈ ವಿಷಯವನ್ನು ಪ್ರಸ್ತಾಪ ಮಾಡಿ. ಈ ವಿಷಯವನ್ನು ಆನಂತರ ತೆಗೆದುಕೊಳ್ಳುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) **ವಿಷಯ** : ಆಂಧ್ರಪ್ರದೇಶ ಕೃಷ್ಣಾ ಬೇಸಿನ್‌ನಲ್ಲಿ ಕಾನೂನು ಬಾಹಿರವಾಗಿ ಯೋಜನೆಗಳನ್ನು ತೆಗೆದುಕೊಂಡಿರುವ ಬಗ್ಗೆ .

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ನೆಲ ಜಲದ ಪ್ರಶ್ನೆಯಾಗಿದೆ. ನಿನ್ನೆ ದಿವಸ ಅರ್ಧಕ್ಕೆ ಚರ್ಚೆಯನ್ನು ನಿಲ್ಲಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಮ್ಮತದ ನಿರ್ಣಯವಾಗಬೇಕೆಂದು ನಾವು ಹೇಳಿದ್ದೇವೆ. ಆದರೆ, ಸರ್ಕಾರ ಈಗ ಮೌನವಾಗಿ ಕುಳಿತರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಿಯಮ 69 ರ ಅಡಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ನಾನು ಅನಂತರ ಸಮಯ ಕೊಡುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ ಮೇಲೂ ಕೂಡ ತಾವೇಕೆ ಈಗ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳತಕ್ಕಂಥ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಕೃಷ್ಣಾ ಗೋದಾವರಿ ನೀರಿನ ವಿಷಯದ ಬಗ್ಗೆ ಕೇಳುತ್ತಿದ್ದೇನೆ. ಇವತ್ತಿನದಿವಸ ಆಂಧ್ರಪ್ರದೇಶದ ಸರ್ಕಾರ ಅನಧಿಕೃತವಾಗಿ 4480 ಕೋಟಿ ರೂಪಾಯಿಗಳ ಅಂದಾಜಿನ ಕಾಮಗಾರಿಯನ್ನು ಪ್ರಾರಂಭ ಮಾಡಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಫ್ಲೋರ್ ಲೀಡರ್ಸ್ ಜೊತೆಗೆ ಮಾನ್ಯ ಸ್ಪೀಕರ್‌ರವರ ಕೊಠಡಿಯಲ್ಲಿ ಸಭೆ

ಸೇರಿದಂಥ ಸಮಯದಲ್ಲಿ ಒಂದು ತೀರ್ಮಾನವಾಗಿದೆ. ಇದನ್ನು ಯಾವಾಗ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಅಲ್ಲಿ ನಿರ್ಣಯವಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ನೀವು ಯಾವಾಗ ನಿರ್ಣಯ ಮಾಡುತ್ತೀರಿ ಎನ್ನತಕ್ಕಂಥ ಪ್ರಶ್ನೆ ನಮ್ಮ ಮುಂದೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಕೃಷ್ಣಾ ನದಿ ವಿಚಾರವನ್ನು ನಂತರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಅಲ್ಲಿದ್ದೆ. ಇದನ್ನು ನಾವು ಅಲ್ಲಿ ಒಪ್ಪಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಒಂದು ಚರ್ಚೆಯಾಗಿ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಸ್ಪೀಕರ್ ಕೊಠಡಿಯಲ್ಲಿ ನಾನೂ ಇದ್ದೆ. ಈ ತೀರ್ಮಾನಕ್ಕೆ ನಾವು ಅಲ್ಲಿ ಬಂದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಆ ಸಂಧರ್ಭದಲ್ಲಿ ನೀವು ಇರಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾವು ಆ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ನಿನ್ನೆ ದಿವಸ ಇಂಥ ಒಂದು ಗಂಭೀರವಾದ ವಿಷಯದ ಬಗ್ಗೆ ಚರ್ಚೆ ಆಗಿರುವುದರಿಂದ, ಆ ಸಮಯದಲ್ಲಿ ಸರ್ಕಾರವೇ ಇಲ್ಲಿದ್ದು ಈ ರೀತಿಯಾದ ಚರ್ಚೆಯಾಗಿದೆ ಎಂದು ಹೇಳಬೇಕಾಗಿತ್ತು.

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆಯವರೇ,ನಿಮ್ಮ ನಾಯಕರೆಲ್ಲಾ ಅಲ್ಲಿದ್ದರು.ಅಲ್ಲಿ ಚರ್ಚೆಯಾಗಿದ್ದು ಏನೆಂದರೆ ಇದನ್ನು ಲಂಚ್ ಆದಮೇಲೆ ಇದರ ಬಗ್ಗೆ ಚರ್ಚೆ ಮಾಡೋಣವೆಂದು ತೀರ್ಮಾನವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇಷ್ಟೊಂದು ಗಂಭೀರವಾದಂಥ ವಿಷಯವಾಗಿರುವುದರಿಂದ..

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇದೊಂದು ಜೀವನ ಬದುಕಿನ ಪ್ರಶ್ನೆಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಕಾರಜೋಳರವರೆ, ಲಂಚ್ ಅವರ್ ಆದಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ. ತಾವೂ ಕೂಡ ಆ ಸಂದರ್ಭದಲ್ಲಿ ಇದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ : ಆ ರೀತಿಯಾದ ನಿರ್ಧಾರವಾಗಿಲ್ಲ. ದಯಮಾಡಿ ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ನಾಯಕರು ಬಂದರು, ಬೇಕಾದರೆ ನೀವೇ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ವಾನುಮತದ ನಿರ್ಣಯವನ್ನು ಮಾಡುವುದಕ್ಕೆ ಒಪ್ಪಿದ್ದೇವೆ. ಇದಕ್ಕೆ ಒಕ್ಕಣಿಕೆ ಹೇಗೆ ಇರಬೇಕೆಂಬುದರ ಬಗ್ಗೆ ಚರ್ಚೆಯಾಗುತ್ತಿದೆ. ಆದ್ದರಿಂದ ಸ್ವಲ್ಪ ಸಮಯಬೇಕೆಂದು ಕೇಳಿದ್ದರೆ ಪರವಾಗಿಲ್ಲ. ಆದರೆ, ಸರ್ವಾನುಮತದ ನಿರ್ಣಯ ಆಗಬೇಕೋ ಅಥವಾ ಬೇಡವೂ ಎನ್ನುವುದರ ಬಗ್ಗೆ ಇನ್ನು ಚರ್ಚೆ ನಡೆಯುತ್ತಿದ್ದರೆ ಪರವಾಗಿಲ್ಲ.ಏಕೆಂದರೆ ಸರ್ವಾನುಮತದ ನಿರ್ಣಯ ಆಗಲಿ.

ಶ್ರೀ ಎಂ.ಪಿ. ಪ್ರಕಾಶ್ : ಆ ಪ್ರಶ್ನೆಯಲ್ಲ. ಈಗ ನಿಮ್ಮ ನಾಯಕರು ಹೇಳುತ್ತಾರೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಕೋಟ್ಯಾಂತರ ರೈತರಿಗೆ ಸಂಬಂಧಪಟ್ಟಂಥ ಪ್ರಮುಖವಾದ ವಿಷಯದ ಬಗ್ಗೆ ನಿನ್ನೆದಿವಸ ಸಾಕಷ್ಟು ಚರ್ಚೆಯಾಗಿದೆ. ಆಂಧ್ರಪ್ರದೇಶದಲ್ಲಿರತಕ್ಕಂಥ ಸರ್ಕಾರ ಯಾರಿಗೂ ಬಗ್ಗದೆ ಅಂದರೆ, ಅವರಿಗೆ ಸುಪ್ರೀಂ ಕೋರ್ಟ್ ಆಗಲಿ ಅಥವಾ ಟ್ರಿಬ್ಯುನಲ್ ಮತ್ತು ಕೇಂದ್ರ ಸರ್ಕಾರದ ಭಯವೂ ಕೂಡ ಅವರಿಗೆ ಇಲ್ಲ. ಒಂದು ರೀತಿಯಲ್ಲಿ ಕಾವೇರಿ ಬೇಸಿನ್ ಮತ್ತು ಕೃಷ್ಣಾ ಬೇಸಿನ್‌ಗೆ ಸಂಬಂಧಪಟ್ಟಂತೆ ನಮ್ಮನ್ನೆಲ್ಲಾ ಅಪರಾಧಿ ಸ್ಥಾನದಲ್ಲಿ ನಿಲ್ಲಿಸತಕ್ಕಂಥ ಕೆಲಸವನ್ನು ಅವರು ಇದುವರೆಗೆ ಮಾಡಿದ್ದಾರೆ. ಈಗ ನಮಗೊಂದು ಸದಾವಕಾಶ ಸಿಕ್ಕಿದೆ. ಏನೆಂದರೆ, ಎಲ್ಲಾ ತೀರ್ಮಗಳನ್ನು ಬದಿಗೊತ್ತಿ ಕಾನೂನು ಬಾಹಿರವಾಗಿ ಈಗ ಪ್ರಾಜೆಕ್ಟ್‌ಗಳನ್ನು ತೆಗೆದು ಕೊಳ್ಳುತ್ತಿರುವುದನ್ನು ಬಹಿರಂಗಮಾಡಿ ಅವರನ್ನು ಈ ದೇಶದ ಜನರಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸತಕ್ಕಂಥ ಸದಾವಕಾಶ ನಮಗೆ ಸಿಕ್ಕಿದೆ. ಆದ್ದರಿಂದ ಇಲ್ಲಿ ಯಾವುದೇ ರಾಜಕಾರಣ ಬೇಡ. ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಆದ್ದರಿಂದ, ಇದರಿಂದ ಹಿಂದೆ ಹೋಗತಕ್ಕಂಥ ಪ್ರಶ್ನೆ ಇಲ್ಲ. ಸರ್ಕಾರದ ಮುಂದೆ ಇಟ್ಟಿರತಕ್ಕಂಥ ನಮ್ಮ ಪ್ರಶ್ನೆ ಏನೆಂದರೆ ಬಚಾವತ್ ಆಯೋಗದ ತೀರ್ಪನ್ನು ಪರಿಗಣಿಸದೆ ಮತ್ತು ಆಂಧ್ರಪ್ರದೇಶ ಆ ತೀರ್ಪಿನ ವಿರುದ್ಧ ಕೆಲವು ಅನಧಿಕೃತ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದೆಯೋ ಅವುಗಳನ್ನು ತತ್‌ಕ್ಷಣ ನಿಲ್ಲಿಸುವಂತೆ ಕೇಂದ್ರ ಸರ್ಕಾರ ಅದೇಶ ನೀಡಬೇಕು ಎನ್ನತಕ್ಕಂಥದ್ದು ನಮ್ಮ ಪ್ರಶ್ನೆ ಆಗಿದೆ. ಆದ್ದರಿಂದ ಈ ಪ್ರಶ್ನೆ ಬಿಟ್ಟು ಬೇರೇನೂ

ಇಲ್ಲ. ಏಕೆಂದರೆ ಇವತ್ತು ನಾವು ಮತ್ತು ನೀವು ಒಟ್ಟಾಗಿ ಈ ರಾಜ್ಯದ ಜನರ ಹಿತದೃಷ್ಟಿಯಿಂದ ಮುಂದೆ ಹೋಗಬೇಕಾಗಿದೆ. ಕಾವೇರಿ ವಿಚಾರದ ಬಗ್ಗೆ ಏನಾಯಿತು, ಪಾದಯಾತ್ರೆಗಳು ಏನಾಯಿತು, ಹೋರಾಟಗಳು ಏನಾಯಿತು, ರಾಜ್ಯದಲ್ಲಿ ಅಶಾಂತಿ ವಾತಾವರಣ ಏನು ಬಂತು ಇವೆಲ್ಲವನ್ನೂ ನಾವು ನೋಡಿದ್ದೇವೆ. ಈಗ ನಾನು ಸರ್ಕಾರಕ್ಕೆ ಹೇಳುವಂತಹದ್ದು ನಾವೆಲ್ಲರೂ ಒಟ್ಟಾಗಿ ಸರ್ವಾನುಮತದಿಂದ ನಾಲ್ಕೇ ಸೆಂಟೆನ್ಸ್‌ನಲ್ಲಿ ನಿರ್ಣಯ ಮಾಡೋಣ. ಇದನ್ನು ಬೇಕಾದರೆ ನಾವೇ ಮೂವ್ ಮಾಡುತ್ತೇವೆ. ಇಲ್ಲದಿದ್ದರೆ ನೀವು ಬೇಕಾದರೆ ಮೂವ್ ಮಾಡಬಹುದು. ಆಂಧ್ರ ಪ್ರದೇಶದ ಸರ್ಕಾರ ಕಾನೂನು ಬಾಹಿರವಾಗಿ ಬಚಾವತ್ ಆಯೋಗದ ತೀರ್ಪನ್ನು ಉಲ್ಲಂಘನೆ ಮಾಡಿ ಈಗ ಏನು ಯೋಜನೆಗಳನ್ನು ಪ್ರಾರಂಭ ಮಾಡುವುದಕ್ಕೆ ಹೊರಟಿದ್ದಾರೆ, ಅದನ್ನು ತಡೆಮಾಡಬೇಕು. ಇದರ ಬಗ್ಗೆ ಕೇಂದ್ರಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು. ಕೇಂದ್ರ ಸರ್ಕಾರ ಸಹಕಾರವನ್ನು ಕೊಡದಿದ್ದರೆ ನಾವು ಸುಪ್ರೀಂಕೋರ್ಟಿಗೆ ಹೋಗುತ್ತೇವೆ. ಈ ರೀತಿಯಾಗಿ ಸರ್ವಾನುಮತದ ನಿರ್ಣಯವಾಗಬೇಕೆಂದು ನಾವು ಸಲಹೆಯನ್ನು ಕೊಟ್ಟಿದ್ದೇವೆ. ಅವರು ಏನು ಮಾಡಬೇಕೆಂಬುದರ ಬಗ್ಗೆ ಅದು ಆಡಳಿತ ಪಕ್ಷಕ್ಕೆ ಬಿಟ್ಟಿದೆ. ನಾವಂತೂ ಕೂಡ ಒಟ್ಟಾಗಿ ಹೋಗುವುದಕ್ಕೆ ಸಿದ್ಧರಿದ್ದೇವೆ. ಈ ಹಿನ್ನೆಲೆಯಲ್ಲಿ ಚರ್ಚೆಯಾದಾಗ ಶೂನ್ಯವೇಳೆಯಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ಕಾರ್ಯಕಲಾಪಗಳು ಆದಮೇಲೆ ನಾನು ಆ ಮನೆಯಲ್ಲಿ ಉತ್ತರವನ್ನು ಕೊಡಬೇಕಾಗಿದೆ. ಹೋಗಿಬರುತ್ತೇನೆಂದು ಹೇಳಿದ್ದರಿಂದ ನಾವು ಒಂದು ರೀತಿಯಲ್ಲಿ ಒಪ್ಪಿಕೊಂಡು ಬಂದಿದ್ದೇವೆ. ಅದರ ಬಗ್ಗೆ ಎರಡು ಮಾತಿಲ್ಲ. ಪ್ರಕಾಶ್‌ರವರೇ ನನಗೆ ಅಧ್ಯಕ್ಷರ ಬಗ್ಗೆ ಪೂರ್ಣ ವಿಶ್ವಾಸವಿದೆ, ನಿಮ್ಮ ಬಗ್ಗೆಯೂ ಕೂಡ ಪೂರ್ಣವಾದ ವಿಶ್ವಾಸವಿದೆ. ಈ ಗಂಭೀರವಾದ ವಿಷಯವನ್ನು ಈ ಸಣ್ಣಪುಟ್ಟ ಬಿಲ್ಲುಗಳು ಯಾವುವು ಇವೆ, ಅವುಗಳನ್ನು ಪಾಸು ಮಾಡಿಕೊಂಡು ಇದು ಆದ ನಂತರ ಇದಕ್ಕೆ ಮಹತ್ವವನ್ನು ಕೊಟ್ಟು ಬಹಳ ಸ್ಪಷ್ಟವಾಗಿ ಈ ನಿರ್ಣಯವನ್ನು ತಾವು ಮಂಡನೆ ಮಾಡಬೇಕು. ಪ್ರಧಾನ ಮಂತ್ರಿಗಳವರನ್ನು ಭೇಟಿ ಮಾಡುವುದರಿಂದ ಏನು ಲಾಭವಾಗುತ್ತದೆ? ಪ್ರಧಾನಿಯವರಿಗೆ ಒತ್ತಡವನ್ನು ತರಬೇಕು. ಇಡೀ ಕನ್ನಡ ನಾಡಿನ ಐದೂವರೆ ಕೋಟಿಯ ಜನರು ಅವರ ಪ್ರತಿನಿಧಿಗಳು 224 ಜನರು ಒಕ್ಕೊರಲಿನಿಂದ ಕಳೆದ ಹತ್ತಾರು ವರ್ಷಗಳಿಂದ ಏನು ಅನ್ಯಾಯಗಳ ಮೇಲೆ ಅನ್ಯಾಯ ನಡೆಯುತ್ತಿದ್ದು, ನಮ್ಮ ನೀರಿನ ಪಾಲಿನ ಬಗ್ಗೆ ಅವರು ಕಸಿದುಕೊಳ್ಳುತ್ತಿದ್ದಾರೆ. 'ಎ' ಸ್ಕೀಮ್‌ನ ನೀರನ್ನು ಪೂರ್ಣ

ಉಪಯೋಗ ಮಾಡಿಕೊಂಡು 'ಬಿ' ಸ್ಕೀಮ್‌ನ ನೀರನ್ನು ಉಪಯೋಗ ಮಾಡಿಕೊಳ್ಳುವಂತಹ ಪ್ರಯತ್ನ ಮಾಡಿ ಆಲಮಟ್ಟಿ ಅಣೆಕಟ್ಟು 519.5 ಮೀಟರ್ ಅದನ್ನು ಇಳಿಸಬೇಕು. ದೇಶದ ಇತಿಹಾಸದಲ್ಲಿ ಮೊದಲನೇ ಬಾರಿಗೆ ಆ ಗೇಟನ್ನು ಕಟ್ ಮಾಡುವಂತಹದ್ದು ನಾವು 524 ಅಡಿಗೆ ಫಿಕ್ಸ್ ಮಾಡಿದ್ದೇವೆ. ಈ ತರಹ ಆಗಿಹೋಯಿತು ಸ್ವಾಮಿ. ಇದು ಏಕೆ ಆಯಿತು? ಇದು ಏನಾಯಿತು? ಅದನ್ನು ನಾವು ಚರ್ಚೆ ಸಮಯದಲ್ಲಿ ಮಾತನಾಡುತ್ತೇವೆ. ಈ ಪಾಪಕ್ಕೆ ಯಾರು ಕಾರಣರು. ಈ ಪಾಪ ಮಾಡಿರುವುದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು? ಯಾವುದು ಆ ಎಕ್ಸ್‌ಪರ್ಟ್ ಕಮಿಟಿ, ಅದು ಯಾವುದೇ ಸರ್ಕಾರವಿರಬಹುದು, ಯಾವುದೇ ಪಕ್ಷವಿರಬಹುದು, ಈ ರಾಜ್ಯದ ರೈತ ಸಮೂಹಕ್ಕೆ ಮಾಡಿರುವಂತಹ ದ್ರೋಹದ ಬಗ್ಗೆ ಚರ್ಚೆಯಾಗಬೇಕು. ಎರಡು ಮೂರು ದಿನಗಳ ಕಾಲ ಸದನದ ಕಾರ್ಯಕಲಾಪಗಳು ನಡೆಯಬೇಕು. ನಾನು ಎಲ್ಲಿಯವರೆವಿಗೆ ಮಾನ್ಯ ಸಿಂಧ್ಯಾರವರನ್ನು, ಮಾನ್ಯ ದೇಶಪಾಂಡೆಯವರನ್ನು, ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ವಿನಂತಿ ಮಾಡುತ್ತೇನೆಂದರೆ, ಇವತ್ತು ಎರಡು ಪ್ರಮುಖವಾದ ವಿಷಯಗಳಿವೆ, ಈ ವರ್ಕ್ ಪ್ರಾರಂಭ. ಮಾಡುವುದರ ಬಗ್ಗೆ ತಡೆಯಾಗಬೇಕು, ಅದರ ಬಗ್ಗೆ ಸರ್ವಾನುಮತದ ನಿರ್ಣಯದಿಂದ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತರಬೇಕು, ಎರಡನೇಯದು ಅದು ಲಾಭ ಅಷ್ಟೇ ಅಲ್ಲ, ಬಹಳ ಮುಖ್ಯವಾಗಿ ಈ 'ಎ' ಸ್ಕೀಮ್‌ನಲ್ಲಿ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕು. ಅದಕ್ಕೆ ನನ್ನ ಸಲಹೆ ಏನೆಂದರೆ, ಸರ್ವ ಪಕ್ಷಗಳ ಜಂಟಿ ಸದನ ಸಮಿತಿಯನ್ನು ರಚನೆ ಮಾಡಬೇಕು. ನಮಗೆ ಟಿ.ಎ. ಮತ್ತು ಡಿ.ಎ. ಬೇಡ, ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಪ್ರತಿ ತಿಂಗಳು ನಿಮ್ಮ ಸಚಿವರ ಜೊತೆ ಹಾಗೂ ಅಧಿಕಾರಿಗಳ ಜೊತೆ ಕುಳಿತುಕೊಳ್ಳೋಣ. ಇದರ ಬಗ್ಗೆ ಪ್ರೋಗ್ರೆಸ್ ಏನಾಗುತ್ತಿದೆ, ಕಳೆದ ಹತ್ತಾರು ವರ್ಷಗಳಿಂದ ಹೇಳುತ್ತಲೇ ಇದ್ದೇವೆ. ಕೃಷ್ಣಾ ಬೇಸಿನ್‌ನಲ್ಲಿ ಹೋದ ವರ್ಷಕ್ಕಿಂತ 500 ಕೋಟಿ ರೂಪಾಯಿಗಳನ್ನು ಈ ವರ್ಷ ಕಡಿಮೆ ಖರ್ಚು ಮಾಡಿದ್ದೇವೆ. ಹೀಗಾದರೆ ಸನ್ಮಾನ್ಯ ಅಧ್ಯಕ್ಷರೆ, ಇನ್ನು ಹತ್ತು ವರ್ಷಗಳಾದರೂ ಕೂಡ ಆಗುವುದಿಲ್ಲ, ಮೊದಲು ನಮ್ಮ ಈ ಪ್ರಾಜೆಕ್ಟ್‌ಗೆ ನಾಳೆ ದಿವಸ 'ಬಿ' ಸ್ಕೀಮ್‌ನಲ್ಲಿ ನೀರು ಬರುತ್ತದೆ. ನಮ್ಮ ಹತ್ತಿರ ಎಲ್ಲಿದೆ ಸ್ವಾಮಿ, ಆಲಮಟ್ಟಿ ಬಿಟ್ಟು ಬೇರೆ ನೀರು ನಿಲ್ಲಿಸುವುದಕ್ಕೆ ಅವಕಾಶ ಎಲ್ಲಿದೆ ಸ್ವಾಮಿ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ವಿಚಾರವನ್ನು ಎತ್ತುತ್ತಾರೆ, ಯಾವುದರ

ಬಗ್ಗೆ ಪ್ರತಿಪಾದನೆ ಮಾಡುತ್ತಾರೆ, ಈ ವಿಚಾರದಲ್ಲಿ ಯಾರದ್ದೂ ಕೂಡ ಬಿನ್ನಾಭಿಪ್ರಾಯಗಳಿಲ್ಲ. ನಾವೆಲ್ಲರೂ ತಮ್ಮ ಕೊಠಡಿಯಲ್ಲಿ ಕುಳಿತು ಮಾತನಾಡಿರತಕ್ಕಂತಹ ಸಂದರ್ಭದಲ್ಲಿ ತಮ್ಮ ಪಕ್ಷದ ನಿಲುವನ್ನು ವ್ಯಕ್ತ ಮಾಡುವ ಬಗ್ಗೆ ಮತ್ತು ರಾಜ್ಯದ ಹಿತಾಸಕ್ತಿಯಲ್ಲಿ ಆ ಪಕ್ಷ ಪರಿಭಾವಿಸಿದಂತೆ ಏನು ನಿರ್ಣಯವನ್ನು ಮಾಡಬೇಕು, ಅದನ್ನು ತಾವು ಮಾಡುತ್ತೇವೆಂದು ಹೇಳಿದರು. ಆ ಸಂದರ್ಭದಲ್ಲಿ ನಮ್ಮ ಅರಿಕೆ ಇಷ್ಟೇ, ಎರಡು ಮಸೂದೆಗಳು ಇವೆ. ನೀರಾವರಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಅಲ್ಲಿ ವಿಧಾನ ಪರಿಷತ್ತಿನಲ್ಲಿರುತ್ತಾರೆ. ಆದ್ದರಿಂದ ಉಳಿದಿರತಕ್ಕಂತಹ ಎಲ್ಲಾ ಮಸೂದೆಗಳು ಮುಗಿದ ಮೇಲೆ ಭೋಜನ ವಿರಾಮದ ನಂತರ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆದ್ದರಿಂದ ಅದಾದ ಮೇಲೆ ತಾವು ಮಾತನಾಡಬಹುದು. ಭೋಜನ ವಿರಾಮದ ನಂತರ ತೆಗೆದುಕೊಳ್ಳಬೇಕೆಂದು ಆಯಿತು. ಒಂದು ವೇಳೆ ಭೋಜನದ ವಿರಾಮದ ಒಳಗೆ ತೆಗೆದುಕೊಳ್ಳಬೇಕಾಗಿದ್ದರೆ ಈ ದಿನದ ಕಾರ್ಯಕಲಾಪದ ಪಟ್ಟಿಯಲ್ಲಿರುವ ಮಸೂದೆಗಳನ್ನು ತೆಗೆದುಕೊಂಡ ಮೇಲೆ ತಾವು ಮಾತನಾಡಬಹುದು, ಇದರ ಬಗ್ಗೆ ನಮ್ಮದು ಆಕ್ಷೇಪಣೆಗಳು ಇಲ್ಲ. ಅಲ್ಲಿ ಆಗಿರುವಂತಹದ್ದರ ಬಗ್ಗೆ ನಾವು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮದು ಒಪ್ಪಿಗೆಗೆ ವಿರುದ್ಧವೇನೂ ಇಲ್ಲ.ಇದರಲ್ಲಿ ನನ್ನ ಅಭಿಪ್ರಾಯವೇನೆಂದರೆ, ಈ ನೀರಾವರಿ ಯೋಜನೆಗಳ ವಿಷಯದಲ್ಲಿ ಅದು ಕಾವೇರಿ ಅಥವಾ ಕೃಷ್ಣಾ ಬೇಸಿನ್ ಇರಲಿ ಇವತ್ತು ಬಜೆಟ್‌ನಲ್ಲಿ ಬೇರೆ ಬೇರೆ ಕಾರಣಗಳಿಗೋಸ್ಕರ ವಿಶೇಷವಾಗಿ ನೀರಾವರಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗಲಿಲ್ಲ. ಮೂರು ನಾಲ್ಕು ದಿವಸ ಈ ಸದನವನ್ನು ಕಾರ್ಯ ಕಲಾಪದ ಅವಧಿಯನ್ನು ಮುಂದೂಡಿ ಇದರ ಬಗ್ಗೆ ಸುಧೀರ್ಘವಾದಂತಹ ಚರ್ಚೆ ಮಾಡಿ. ಇದಕ್ಕೊಂದು ಪರಿಹಾರವನ್ನು ಹುಡುಕಬೇಕು. ನಾಗಾರ್ಜುನ ಅಥವಾ ಬೇರೆ ಪ್ರಾಜೆಕ್ಟ್‌ನ್ನು ಮಾಡಬೇಕಾದರೆ ಪ್ರತಿಯೊಬ್ಬ ಅಧಿಕಾರಿಗಳು 10 ಡೇಸ್ ಸ್ಯಾಲರಿಯನ್ನು ಕೊಟ್ಟರು. ಆಂಧ್ರದವರು ಎಲ್ಲವನ್ನೂ ಬದಿಗೊತ್ತಿ ಪೂರ್ಣಮಾಡಿದರು. ಆ ಇಚ್ಛಾಶಕ್ತಿಯನ್ನು ನಮ್ಮ ರಾಜ್ಯ ಸರ್ಕಾರದವರು ಪ್ರಕಟ ಮಾಡಬೇಕು. ಅದರ ಬಗ್ಗೆ ಚರ್ಚೆ ಮಾಡೋಣ. ದಯಮಾಡಿ ನೀರಾವರಿ ಸಚಿವರು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಬೇಕು. ಆ ಹೈದರಾಬಾದ್ ಕರ್ನಾಟಕದಿಂದ ಬಂದವರಾಗಿದ್ದೀರಿ, ಆ ಸಮೂಹಕ್ಕೆ ಅನ್ಯಾಯವಾಗುತ್ತಿದೆ ಎಂಬ ಭಾವನೆ ಆಗುವುದು ಬೇಡ. ಅದಕ್ಕಾಗಿ

ನೀವು ಚರ್ಚೆಮಾಡಿ ಬಹುಶ: ಇದರಲ್ಲಿ ನಾವು ನೀವು ರಾಜಕಾರಣವನ್ನು ಬೆಳೆಸದೆ, ಇದಕ್ಕಾಗಿ ಜಂಟಿ ಸದನ ಸಮಿತಿಯನ್ನು ಮಾಡಬೇಕು. ಇದರ ಬಗ್ಗೆ ತಿಂಗಳಿಗೊಮ್ಮೆ ಪರಿಶೀಲನೆ ಮಾಡಬೇಕು, ಇದಕ್ಕಾಗಿ ಹೆಚ್ಚು ಹಣವನ್ನು ತೆಗೆದಿಡಬೇಕು. 'ಎ'ಸ್ಕೀಂನ ಪ್ರಾಜೆಕ್ಟ್‌ನ್ನು ಪೂರ್ಣಮಾಡಬೇಕು, ಕೇಂದ್ರ ಸರ್ಕಾರದ ಪ್ರಧಾನಮಂತ್ರಿಯವರನ್ನು ಭೇಟಿ ಮಾಡುವುದರಿಂದ ಏನೂ ಸಮಸ್ಯೆ ಬಗೆಹರಿಯುವುದಿಲ್ಲ. ಅವರಿಗೆ ಈ ರಾಜ್ಯದ ಐದೂವರೆ ಕೋಟಿ ಜನರು ಒಟ್ಟಾಗಿದ್ದಾರೆ, ಕರ್ನಾಟಕದ ಜನರಿಗೆ ಅನ್ಯಾಯವಾಗದಿರುವ ಹಾಗೆ ನೋಡಿಕೊಳ್ಳಬೇಕು ಎಂಬ ವಾತಾವರಣವನ್ನು ಮೂಡಿಸಬೇಕಾಗಿದೆ.ಇದರ ಬಗ್ಗೆ ಒಟ್ಟಾಗಿ ಸೇರಿ ಮಧ್ಯಾಹ್ನ ಮೇಲೆ ಅಥವಾ ಈ ಬಿಲ್ ಪಾಸಾದ ಮೇಲೆ ಚರ್ಚೆ ಮಾಡಿ ಇದರ ಬಗ್ಗೆ ಪರಿಹಾರವನ್ನು ಹುಡುಕುವಂತಹ ಒಂದು ಇಚ್ಚಾಶಕ್ತಿಯನ್ನು ತಾವು ಪ್ರಕಟಸಬೇಕು.

(ಆ) ವಿಷಯ: ದಿವಂಗತ ಕೆಂಗಲ್ ಹನುಮಂತಯ್ಯನವರ ಜನ್ಮಶತಮಾನೋತ್ಸವ ಆಚರಣೆ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ತರುತ್ತಿದ್ದೇನೆ. ವಿಧಾನಸೌಧವನ್ನು ನಿರ್ಮಾಣ ಮಾಡಿದಂತಹ ಕೆಂಗಲ್ ಹನುಮಂತಯ್ಯನವರದ್ದು 100ನೇ ವರ್ಷ ಶತಮಾನೋತ್ಸವ ಆಚರಣೆಯ ವರ್ಷ ಬರುತ್ತಿದೆ. ಈ ಶತಮಾನೋತ್ಸವ ಆಚರಣೆಯನ್ನು ಬಹಳ ವಿಜೃಂಬಣೆಯಿಂದ ಅರ್ಥಪೂರ್ಣವಾಗಿ ಆಚರಣೆ ಮಾಡಬೇಕಾಗುತ್ತದೆ. ಬಹುಶ: ಕರ್ನಾಟಕ ರಾಜ್ಯದಲ್ಲಿ ಕರ್ನಾಟಕದ ಏಕೀಕರಣಕ್ಕೆ ತ್ಯಾಗಮಾಡಿ ಅಧಿಕಾರ ಕಳೆದುಕೊಂಡಂತಹ ಒಬ್ಬ ಅತ್ಯಂತ ಮೇಧಾವಿ, ವ್ಯಕ್ತಿ ಈ ರಾಜ್ಯಕ್ಕೋಸ್ಕರವಾಗಿ ನಾವು ಕುಳಿತಿರತಕ್ಕಂತಹ ಈ ಸದನ ಅವರೇ ನಿರ್ಮಾಣ ಮಾಡಿದಂತಹ ಸದನವಾಗಿದೆ. ಬಹುಶ: ಅವತ್ತಿನ ಪರಿಸ್ಥಿತಿಯಲ್ಲಿ, ಆ ದಿನದ ರಾಜಕಾರಣದಲ್ಲಿ ಕೊನೆಯ ಮೂರು ತಿಂಗಳು ಇರುವಾಗ ತಮ್ಮ ಅಧಿಕಾರವನ್ನು ಕಳೆದು ಕೊಳ್ಳಬೇಕಾಯಿತು. ಅವರು ಈ ಸದನದ ಒಳಗಡೆ ಬರುವುದಕ್ಕಾಗಲಿಲ್ಲ. ಸದನದೊಳಗಡೆ ಮುಖ್ಯಮಂತ್ರಿಯಾಗಲಿ, ಶಾಸಕರಾಗಿ ಆಗಲಿ ಈ ಸದನಕ್ಕೆ ಅವರು ಬರುವುದಕ್ಕಾಗಲಿಲ್ಲ ಅಂತಹ ಮಹಾವ್ಯಕ್ತಿ, ಈ ರಾಜ್ಯದಲ್ಲಿ ಧ್ರುವತಾರೆಯಾಗಿ ಕರ್ನಾಟಕದ ಒಂದು ಮುಂದಿನ ದೂರದೃಷ್ಟಿಯಿಂದ ಮೈಸೂರಿಗೆ ಬಳ್ಳಾರಿ ಜಿಲ್ಲೆ ಸೇರಬೇಕಾದರೆ ಪ್ರಪ್ರಥಮವಾಗಿ ಕೆಂಗಲ್ ಹನುಮಂತಯ್ಯನವರು ಎಷ್ಟು ದಿಟ್ಟನಿಲುವನ್ನು ತೆಗೆದುಕೊಂಡರೆಂದರೆ,